ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:	1164
ಸದಸ್ಯರ ಹೆಸರು:	ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	22.09.2021
ಉತ್ತರಿಸುವ ಸಚಿವರು:	ಕಂದಾಯ ಸಚಿವರು

	ಪ್ರಶ್ನೆ	**ಉತ್ತರ**
ಅ)	ಕೊಡಗು ಜಿಲ್ಲೆಯಲ್ಲಿರುವ ಆದಿವಾಸಿ ಜನಾಂಗದ ಅನೇಕ ಕುಟುಂಬಗಳಿಗೆ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳು ಹೊಂದದೆ ಇರುವುದರಿಂದ ಸರ್ಕಾರದ ಬಹುತೇಕ ಸವಲತ್ತುಗಳಿಂದ ವಂಚಿತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
ಆ)	ಈ ಆದಿವಾಸಿ ಜನರಿಗೆ ಅವಶ್ಯಕ ದಾಖಲೆಗಳನ್ನು ಮಾಡಿಕೊಡಲು ಸರ್ಕಾರದ ಕ್ರಮಗಳೇನು: ಹಾಗೂ ದಾಖಲೆಗಳನ್ನು ಮಾಡಿಕೊಡಲು ಜಿಲ್ಲಾಮಟ್ಟ/ತಾಲ್ಲೂಕು ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ವಿವರ ಪಡೆದು ಆದಾಲತ್‌ಗಳನ್ನು ನಡೆಸಿ, ದಾಖಲೆಗಳನ್ನು ನೀಡಲು ಸರ್ಕಾರದ ಚಿಂತನೆಗಳೇನು; (ವಿವರ ಒದಗಿಸುವುದು)	ಕೊಡಗು ಜಿಲ್ಲೆಯಲ್ಲಿರುವ ಪರಿಶಿಷ್ಟ ಪಂಗಡದ ಜನಾಂಗದವರ ಸರ್ವೆ ನಡೆಸಿದಾಗ ಹಾಗೂ ಭೇಟಿ ಮಾಡಿ ಪರಿಶೀಲಿಸಿದಾಗ ವಿವಿಧ ಅವಶ್ಯಕ ದಾಖಲಾತಿಗಳಿಲ್ಲದೇ ಇರುವುದು ಕಂಡುಬಂದಿದ್ದು, ವಿಶೇಷ ಆಂದೋಲನದ ಮೂಲಕ ಅವಶ್ಯಕ ದಾಖಲೆಗಳನ್ನು ಸಿದ್ಧಪಡಿಸಲು ಹಾಡಿಗಳಿಗೆ ತೆರಳಿ ಆಧಾರ್ ಕಾರ್ಡ್, ಪಡಿತರ ಚೀಟಿ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
ಇ)	ಈ ಕಂದಾಯ ಸೇವೆಯ ಆದಾಲತ್ ಗಳನ್ನು ಯಾವ ಕಾಲಮಿತಿಯಲ್ಲಿ ಯಾವ ಕಾಲಮಿತಿಯಲ್ಲಿ ಮಾಡಲಾಗು ವುದು? (ಮಾಹಿತಿ ನೀಡುವುದು)	ರಾಜ್ಯದಲ್ಲಿ ಕೋವಿಡ್-19 ಧನಾತ್ಮಕ ಪ್ರಕರಣಗಳ ದರವು ಸಂಪೂರ್ಣವಾಗಿ ಕಡಿಮೆಯಾದ ತರುವಾಯ ತಜ್ಞರ ಅಭಿಪ್ರಾಯವನ್ನಾಧರಿಸಿ, ಕ್ರಮವಹಿಸಲಾಗು ವುದು.

ಸಂಖ್ಯೆ: ಕಂಇ 145 ಸಮಿತಿ 2021

(ಆರ್. ಅಶೋಕ)
ಕಂದಾಯ ಸಚಿವರು